# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ
## ಕಛೇರಿಯಲ್ಲಿ ದಿನಾಂಕ: 24.02.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-24-02-2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಎಸ್.ಪ್ರಭಾಕರ್, ಪ್ರಧಾನ ಅಭಿಯಂತರರು ಬಿ.ಬಿ.ಎಂ.ಪಿ. | 9480685379 |
| ೦೨ | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಬಿಜಗದೀಶ್ ಎ.ಎಸ್.ಐ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆ | 8867733318 |
| ೦೬ | ಶ್ರೀ.ಹೋಲಿಯಪ್ಪ ಮಾರ್ಷ್‌ಲ್ | 8904349926 |
| ೦೭ | ಶ್ರೀಮತಿ.ಆಶಾ ಸ.ಅ ಬೆಸ್ಕಾಂ | 9900724229 |
| ೦೮ | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| ೦೯ | ಶ್ರೀ ಸೈಯದ್ ನಸರುದ್ದೀನ್ ಸದಸ್ಯರು | 9741518897 |
| ೧೦ | ಶ್ರೀ.ಬಿ.ವಿಶ್ವಕುಮಾರ್ ಸದಸ್ಯರು | 9845371963 |
| ೧೧ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾನಿ | 9901002067 |
| ೧೨ | ಶ್ರೀ ರಮೇಶ್ ಸದಸ್ಯರು | 9731108622 |
| ೧೩ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾನಿ | 9980225272 |
| ೧೪ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೫ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9886339044 |
| ೧೬ | ಶ್ರೀಮತಿ.ಸ್ವಾಮಿಗೌಡ ಪರಿವೀಕ್ಷಕರು ತೋಟಗಾರಿಕೆ ಇಲಾಖೆ ದಕ್ಷಿಣ | 9945378526 |
| ೧೭ | ಶ್ರೀ ಮಂಜೂನಾಥ ಪಿ. ಮೇಲ್ವಿಚಾರಕರು ಘ.ತ್ಯಾನಿ | 9740903427 |
| ೨೮ | ಶ್ರೀಮತಿ ಕವಿತ ಆರ್ | 9620394514 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಮೊದಲನೇಯದಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸೊಳ್ಳೆಗಳ ನಿಯಂತ್ರಣಕ್ಕೆ ಔಷದಿ ಸಿಂಪಡಣೆ ಮತ್ತು ಫಾಗಿಂಗ್ ಮಾಡುತ್ತಿರುವ ವಿವರಗಳನ್ನು ಸಲ್ಲಿಸಲು ಹಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ಮಲ್ಲಿಕಾರ್ಜುನ್ ರವರಿಗೆ ಸೂಚಿಸಿದರು. ಈ ಸಂಬಂಧ ಹಿರಿಯ ಆರೋಗ್ಯಕ್ಷರು ಮಾತನಾಡಿ, ವಾರ್ಡ್‌ವ್ಯಾಪ್ತಿಯ ಎಸ್.ಜಿ.ಪಾಳ್ಯ, ಚಿಕ್ಕಾಡುಗೋಡಿ ಮತ್ತು ಮಾರುತಿನಗರ 3 ಬ್ಲಾಕ್‌ಗಳನ್ನಾಗಿ ಮಾಡಿ ಪ್ರತಿ ಬ್ಲಾಕ್‌ಗೆ ಒಂದು ದಿನ ಬಿಟ್ಟು ದಿನಗಳಂತೆ ಸೊಳ್ಳೆ ಔಷದಿ ಸಿಂಪಡಣೆ ಮತ್ತು ಫಾಗಿಂಗ್ ಕಾರ್ಯ ಮಾಡಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

2) ಸಭೆಗೆ ಹಾಜರಿದ್ದ ಶ್ರೀ ಲೋಕೇಶ್ ಮಾತನಾಡಿ, ಸೆಂಟ್ ಜಾನ್ಸ್ ಪಾದಚಾರಿ ಮಾರ್ಗದಲ್ಲಿ ಬೀದಿ ದೀಪ ಹಾಳಾಗಿರುತ್ತದೆ. ಇದರಿಂದ ಕಳ್ಳತನ ಹಾಗೂ ಇತರೆ ಅನೈತಿಕ ಚಟುವಟಿಗಳು ನಡೆಯುವ ಸಂಭವ ಹೆಚ್ಚಾಗಿರುತ್ತದೆ. ಆದುದರಿಂದ ಸದರಿ ರಸ್ತೆ ಬೀದಿದೀಪ ಸರಿಪಡಿಸಬೇಕೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಸಭೆಗೆ ಹಾಜರಿದ್ದ ಶ್ರೀ ಗಿರೀಶ್ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರನ್ನು ಉದ್ದೇಶಿಸಿ ಕೂಡಲೇ ಸೂಕ್ತ ಕ್ರಮವಹಿಸಲು ಸೂಚಿಸಿದರು.

3) ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆಯ ಹೊಸ ರುಪಾಂತರಿ ತಳಿ ಓಮಿಕ್ರಾನ್ ರೋಗ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೆಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

4) ಸಭಾಧ್ಯಕ್ಷರು ಮಾತನಾಡಿ, ಕೋವಿಡ್–19 3ನೇ ಅಲೆಯ ವಿವರ ಹಾಗೂ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಲಾಗಿ, ಸಭೆಗೆ ಹಾಜರಿದ್ದ ಮೇಡಿಕಲ್ ಆಫಿಸರ್ ಡಾ॥ ಕಮ್ರಾನ್ ಮಾತನಾಡಿ ಹಾಲಿ ವಾಸ್ತುಸ್ಥಿತಿ ಕೋವಿಡ್–3ನೇ ಅಲೆ ಮತ್ತು ರೂಪಾಂತರಿ ತಳಿ ಓಮಿಕ್ರಾನ್ ರೋಗ ನಿಯಂತ್ರಣದಲ್ಲಿದ್ದು, ಪಾಸಿಟಿವ್ ಕೆಸ್‌ಗಳು ಇಳಿಕೆಯಾಗಿರುತ್ತದೆ. ಹೋಮ್ ಐಸೋಲೇಷನ್ ಕೂಡ ನಿಯಂತ್ರಣದಲ್ಲಿರುತ್ತದೆ. ಆದರೂ ರೋಗ ಹರಡದಂತೆ ಮುಂಜಾಗ್ರತೆ ಕ್ರಮಗಳು ಕೈಗೊಳ್ಳಲು ನಮ್ಮ ಜವಾಬ್ದಾರಿಯಾಗಿರುತ್ತದೆ. ಮುಂದೆ ಕೋರೊನಾ ರೂಪಾಂತರಿ ಬೆರೆ ಬೆರೆ ತಳಿಗಳು ಬರುವ ಸಂಭಬವಿದ್ದು, ನಮ್ಮ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮುಂಜಾಗ್ರತ ಕ್ರಮಕೈಗೊಳ್ಳಲು ಸಿದ್ಧವಿರುವದಾಗಿ ಸಭೆಗೆ ತಿಳಿಸಿದರು.

5) ಶ್ರೀ.ಲೋಕೆಶ್.ಎನ್ ರವರು ಮಾತನಾಡಿ ಚಿಕ್ಕಾಡುಗೋಡಿ ಪ್ರದೇಶದಲ್ಲಿ ಸೈಕಲ್ ಕಳ್ಳತನವಾಗಿರುವ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿರುತ್ತದೆ. ಈ ಬಗ್ಗೆ ಮಡಿವಾಳ ಪೊಲೀಸ್ ಠಾಣೆಯವರಿಗೆ ಹಲವಾರು ಬಾರಿ ದೂರು ನೀಡಿದ್ದರೂ ಸಹ ಯಾವುದೇ ಕ್ರಮಗಳು ಜರುಗಿಸದಿರುವುದು ಕಂಡುಬಂದಿರುತ್ತದೆ ಹಾಗೂ ರಾತ್ರಿ 11:00 ಗಂಟೆ ಮತ್ತು 03.00 ಗಂಟೆ ಸಮಯದಲ್ಲಿ ಈ ಪ್ರದೇಶಕ್ಕೆ ಗಸ್ತುಮಾಡುವುದು ಸೂಕ್ತವಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮಾತನಾಡಿ ಸಭೆಗೆ ಹಾಜರಿದ್ದ ಪೊಲೀಸ್ ಅಧಿಕಾರಿರವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

6) ಶ್ರೀ.ಲೋಕೆಶ್ ಎನ್ ರವರು ಮಾತನಾಡಿ, ಸಹಜ ಮರಣಹೊಂದಿರುವ ವ್ಯಕ್ತಗಳಿಗೆ ಕೋವಿಡ್ ನೆಗೆಟೀವ್ ಪ್ರಮಾಣ ಪತ್ರವನ್ನು ಒದಗಿಸಲು ಪಾಲಿಕೆಯವರು ಸರಿಯಾದ ಕ್ರಮಗಳನ್ನು ಕೈಗೊಳ್ಳತ್ತಿರುವುದುದಿಲ್ಲ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಸಭಾಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷರನ್ನು ಉದ್ದೇಶಿಸಿ ಮಾತನಾಡಿ ಪ್ರಸ್ತಾಪಿತ ವಿಷಯದ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.

7) ಮೇ॥SAHAS ಸ್ವಯಂ ಸಂಸ್ಥೆಯವರು ಈ ಸಭೆಯಲ್ಲಿ ಘನತ್ಯಾಜ್ಯ ವಿಂಗಡಣೆ ಮಾಡುವ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರಲ್ಲಿ ಒಣ ತ್ಯಾಜ್ಯ ಮತ್ತು ಹಸಿ ತ್ಯಾಜ್ಯ ವಿಂಗಡಣೆ ಮಾಡುವುದುದು, ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಗೊಬ್ಬರವನ್ನು ತಯಾರಿಸುವುದು, ಜೈವಿಕ ತ್ಯಾಜ್ಯ, ಅಜೈವಿಕ ತ್ಯಾಜ್ಯ ಮತ್ತು ಅಪಾಯಕಾರಿ ತ್ಯಾಜ್ಯವನ್ನು ಬೇರ್ಪಡಿಸಿ ಸಂಗ್ರಹಣೆ ಮಾಡಿ ನೀಡುವುದು. ಸಾದ್ಯವಾದಷ್ಟು ಜೈವಿಕ ತ್ಯಾಜ್ಯವನ್ನು ಮನೆಯಲ್ಲಿಯೇ ಸಂಸ್ಕರಣೆಮಾಡಿ ಗೊಬ್ಬರವನ್ನು ತಯಾರಿಸಿ, ತಮ್ಮ ಮನೆ ಮೇಲ್ಚಾವಣಿ ಮೇಲೆ ರಾಸಾಯನಿಕ ರಹಿತ ತರಕಾರಿ, ಹಣ್ಣಿನಗಿಡಗಳು, ಸೊಪ್ಪು ಬೆಳಸಬಹುದಾಗಿರುತ್ತದೆ.

8) ಡಾ॥ ಕಮ್ರಾನ್ ಮೆಡಿಕಲ್ ಆಫಿಸರ್ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಇದೆ ತಿಂಗಳು 27ನೇ ತಾರಿಖು ರಾಷ್ಟ್ರವ್ಯಾಪ್ತಿ ಪೋಲೀಯೋ ಲಸಿಕೆಯನ್ನು ನೀಡಲು ಹಮ್ಮಿಕೊಂಡಿದ್ದು, ವಾರ್ಡ್ ವ್ಯಾಪ್ತಿಯ ಎಲ್ಲಾ ಸದಸ್ಯರು ತಮ್ಮ ತಮ್ಮ ಪ್ರದೇಶದಲ್ಲಿ 5 ವರ್ಷದ ಕೆಳಗೆ ಇರುವ ಎಲ್ಲಾ ಮಕ್ಕಳಿಗೆ ತಪ್ಪದೇ ಪೋಲೀಯೋ ಲಸಿಕೆಯನ್ನು ಪಡೆಯಲು ಪೋಷಕರಿಗೆ ಮನವರಿಕೆ ಮಾಡಿಕೊಡಬೇಕೆಂದು ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಹಾಲಿ ದೇಶವ್ಯಾಪ್ತಿ ಕೋರೋನ ರೋಗಾಣುವಿನ ಹೊಸದಾಗಿ ರೂಪಾಂತರ ತಳಿ ಓಮಿಕ್ರಾನ್ ಸಾಂಕ್ರಾಮಿಕ ರೋಗ ವ್ಯಾಪಕವಾಗಿ ಹರಡುತ್ತಿದುರವುದರಿಂದ ರೋಗ ಹರಡುವುದನ್ನು ತಡೆಗಟ್ಟಲು ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳಲು ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರಿಗೆ ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಶ್ರೀ. ಸತೀಶ್.ಡಿ) | (ಶ್ರೀ. ಎಸ್.ಪ್ರಭಾಕರ್) |
| ಕಾರ್ಯದರ್ಶಿಗಳು | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್–152 ಎಸ್.ಜಿ.ಪಾಳ್ಯ | ವಾರ್ಡ್–152 ಎಸ್.ಜಿ.ಪಾಳ್ಯ |

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.